# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ: 7/2020

ಫ್ರಾಸಾ–05

ಚಾಸಾ–04

| | | |
|---|---|---|
| ಸಾಕ್ಷಿಯ ಹೆಸರು | – | ಮಹಮ್ಮದಅಲಿ ದುಕಾನದಾರ |
| ತಂದೆ ಹೆಸರು | – | ಇಸ್ಮಾಯಿಲ್ |
| ವಯಸ್ಸು | – | 36 ವರ್ಷ |
| ಉದ್ಯೋಗ | – | ಎಲ್ಕ್ಟಿಶಿಯನ್ |
| ವಾಸಸ್ಥಳ | – | ಸಿಮ್ಲಾನಗರ, ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | – | 11-03-2024 |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ–5 ರವರ ಪರಿಚಯ ಇಲ್ಲ. ಆರೋಪಿ 3 ಮತ್ತು 4 ರವರನ್ನು ನೋಡಿಲ್ಲ ಮತ್ತು ಅವರ ಪರಿಚಯ ಇಲ್ಲ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖೆಯನ್ನು ನಿಶಾನೆ ಪಿ–58 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ– 58 (ಎ) ಎಂದು ಗುರುತಿಸಲಾಯಿತು. ಈ ದಾಖಲೆಯಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

2. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆಯಲ್ಲಿ ತನ್ನ ಸಹಿ ಇರುವುದಾಗಿ ಗುರುತಿಸಿದ್ದು , ಸದರಿ ದಾಖಲೆಯನ್ನು ನಿಶಾನೆ ಪಿ– 59 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ– 59 (ಎ ) ಎಂದು ಗುರುತಿಸಲಾಯಿತು. ನಿಶಾನೆ ಪಿ– 59 ರಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸದರಿ ದಾಖಲೆಯ ಬಗ್ಗೆ ನನಗೆ ಹೇಳಿಲ್ಲ . ನನ್ನ ಫೋಟೊ ನೋಡಿದರೆ ಗುರುತಿಸುತ್ತೇನೆ. ಸದರಿ ಫೋಟೊಗಳನ್ನು ನಿಶಾನೆ ಪಿ–60 ರಿಂದ 73 ಎಂದು ಗುರುತಿಸಲಾಯಿತು. ಸದರಿ

ಫೋಟೊಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ಫೋಟೊಗಳಲ್ಲಿ ನಾನು ಕಂಡುಬರುತ್ತೇನೆ.

3. ನನ್ನ ಸಮಕ್ಷಮದಲ್ಲಿ ಪೊಲೀಸರ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿಲ್ಲ. ಪೊಲೀಸರು ನನಗೆ ಕಬ್ಬಿಣದ ಬೋಲ್ಟ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀಸವಾಲು ಸರ್ಕಾರಿ ಅಭಿಯೋಜಕರಿಂದಃ**

4. ದಿಃ 15-9-2020 ರಂದು ಬೆಳಿಗ್ಗೆ 6.50 ಘಂಟೆ ಸುಮಾರಿಗೆ ಸಬ ಅರ್ಬನ ಪೊಲೀಸಠಾಣೆ ಪಿಎಸ್ಐ ರವರು ನನ್ನನ್ನು ಮತ್ತು ಚಂದ್ರಕಾಂತ ರವರನ್ನು ಹುಬ್ಬಳ್ಳಿ ಉಪನಗರ ಠಾಣೆಗೆ ಕರೆಸಿದ್ದು , ತಮಗೆ ಬಂದ ಬಾತ್ಮಿ ವಿಷಯ ತಿಳಿಸಿ ಪಂಚರಾಗಿ ಸಹಕರಿಸಲು ನಿಶಾನೆ ಪಿ- 58 ರಂತೆ ನೋಟೀಸು ನೀಡಿದರು ಅಂದರೆ ಸರಿಯಲ್ಲ. 1 ನೇ ಆರೋಪಿ ಮಾರುತಿ ಹರಿಣಶಿಕಾರಿ ರವರು ಗದ್ದನಕೇರಿ ಕ್ರಾಸ ಹತ್ತಿರ ಸೀಮೆಕೇರಿಯ ಕಾಮವ್ವನ ಗುಡಿ ಹತ್ತಿರ , 3 ನೇ ಆರೋಪಿ ಅಬ್ದುಲ ರಜಾಕ ತನಗೆ ಗಾಂಜಾ ಮಾರಾಟ ಮಾಡಿದ ಬಗ್ಗೆ ತಿಳಿಸಿದ್ದು ಅದರಂತೆ ಗದ್ದನಕೇರಿ ಕ್ರಾಸ ಬಳಿ 3 ನೇ ಆರೋಪಿಯ ಮೇಲೆ ದಾಳಿ ಮಾಡಲು ಸಹಕರಿಸಬೇಕೆಂದು ವಿಷಯ ತಿಳಿಸಿದರು ಅಂದರೆ ಸರಿಯಲ್ಲ. ನನ್ನನ್ನು ಮತ್ತು

ಚಂದ್ರಕಾಂತ ಹಾಗೂ ಪೊಲೀಸ ಸಿಬ್ಬಂದಿಯವರ ಜೊತೆ ಗದ್ದನಕೇರಿ ಕ್ರಾಸ ಬಳಿ ನಮ್ಮನ್ನು ಕರೆದುಕೊಂಡು ಹೋದರು ಅಂದರೆ ಸರಿಯಲ್ಲ. ರಮೇಶ ಎಂಬ ತೂಕ ಮಾಡುವ ವ್ಯಕ್ತಿಯನ್ನು ಸಹ ನಮ್ಮ ಜೊತೆ ಕರೆದುಕೊಂಡು ಹೋದರು ಅಂದರೆ ಸರಿಯಲ್ಲ.

5. ನಂತರ ಬೆಳಿಗ್ಗೆ 7 ಘಂಟೆಗೆ ಠಾಣೆ ಬಿಟ್ಟು ಗದ್ದನ ಕೇರಿ ಕ್ರಾಸ ಬಳಿ ಹೋಗಿದ್ದು ಅಲ್ಲಿ ನಿಂತು ಗಮನಿಸಲಾಗಿ 3 ನೇ ಆರೋಪಿ ಒಂದು ಕಾರಿನಲ್ಲಿ ಬಂದಿದ್ದು , ಅಲ್ಲಿ ಪೊಲೀಸರು ಆತನನ್ನು ತಡೆದು ವಿಚಾರಣೆ ಮಾಡಿದರು ಅಂದರೆ ಸರಿಯಲ್ಲ. ನಂತರ ಆತನಿಗೆ ಗಾಂಜಾ ಎಲ್ಲಿದೆ ಎಂದು ವಿಚಾರಿಸಲಾಗಿ ಆತ ಕಾರಿನ ಡಿಕ್ಕಿ ತೆರೆದು ತೋರಿಸಲಾಗಿ ಅದರಿಂದ ಘಾಟು ವಾಸನೆ ಬರುತ್ತಿದ್ದ ಒಂದು ಪಾಕೇಟ ದೊರೆಯಿತು ಅಂದರೆ ಸರಿಯಲ್ಲ. ಸದರಿ ಗಾಂಜಾವನ್ನು ಎಲ್ಲಿಂದ ತಂದಿರುವೆ ಎಂದು ವಿಚಾರಿಸಲಾಗಿ ಆತನು ಕಲಬುರ್ಗಿ ಬೆಂಗಳೂರು ರಸ್ತೆಯ ಮೇಲೆ ಒಬ್ಬನ ಬಳಿಯಿಂದ ಆತ ಗಾಂಜಾ ತಂದಿರುವುದಾಗಿ ತಿಳಿಸಿದನು ಅಂದರೆ ಸರಿಯಲ್ಲ. ನಂತರ ಸದರಿ ಗಾಂಜಾವನ್ನು ತೂಕ ಮಾಡುವ ವ್ಯಕ್ತಿಯಿಂದ ತೂಕ ಮಾಡಿಸಲಾಗಿ ಅದು 1 ಕೆ ಜಿ 10 ಗ್ರಾಂ ತೂಕ ಇತ್ತು ಅಂದರೆ ಸರಿಯಲ್ಲ. ಅದನ್ನು ಪರಿಶೀಲಿಸಲಾಗಿ ಅದು ಗಾಂಜಾದ ಎಲೆ ಮತ್ತು ಬೀಜ ಇರುವುದುಕಂಡುಬಂದಿತು ಅಂದರೆ ಸರಿಯಲ್ಲ. ಪೊಲೀಸ ರು ಸದರಿ ಪಾಕೇಟನಿಂದ 100 ಗ್ರಾಂ ಮಾದರಿಗಾಗಿ ಪಡೆದುಕೊಂಡು ಬ್ರೌನ ಕಲರ ಪಾಕೇಟನಲ್ಲಿ ಹಾಕಿ ಟಿ ವಿ ಎಸ್ 8.8 ಎಂಬ ಬೋಲ್ಟನಿಂದ ಸೀಲು ಮಾಡಿದರು ಅಂದರೆ ಸರಿಯಲ್ಲ. ಸದರಿ ಪಾಕೇಟ ಮೇಲೆ ಪಿ ಎಸ್ ಐ , ಪಂಚರ ಹಾಗೂ ನಮ್ಮ ಸಹಿವುಳ್ಳ ಚೀಟಿ ಅಂಟಿಸಿ ಎಸ್–1 ಎಂದು ಗುರುತಿಸಿದರು ಅಂದರೆ ಸರಿಯಲ್ಲ. ಅದರಂತೆ ಉಳಿದ ಗಾಂಜಾವನ್ನು ಸಹ ಪ್ಯಾಕ ಮಾಡಿ ಟಿ ವಿ ಎಸ್ 8.8 ಎಂಬ ಬೋಲ್ಟನಿಂದ ಸೀಲು ಮಾಡಿದರು ಅಂದರೆ ಸರಿಯಲ್ಲ. ಸದರಿ ಪಾಕೇಟ ಮೇಲೆ ಪಿ ಎಸ್ ಐ , ಪಂಚರ ಹಾಗೂ ನಮ್ಮ ಸಹಿವುಳ್ಳ ಚೀಟಿ ಅಂಟಿಸಿದರು ಹಾಗೂ ಅದನ್ನು ಆರ್–1 ಎಂದು ಗುರುತಿಸಿದರು ಅಂದರೆ ಸರಿಯಲ್ಲ.

6. ನಂತರ ಆರೋಪಿತನನ್ನು ವಿಚಾರಣೆ ಮಾಡಲಾಗಿ ಆತ ತನ್ನ ಬಳಿಯಿಂದ 1500 /- ಹಣವನ್ನು ಹಾಜರುಪಡಿಸಿದನು ಮತ್ತು ಬಿಳಿ ಬಣ್ಣದ ಸ್ಯಾಮಸಂಗ ಫೋನ ಹಾಜರುಪಡಿಸಿದನು ಅಂದರೆ ಸರಿಯಲ್ಲ. ಅದೇರೀತಿ ಕಾರ ನಂಃ ಎಂ ಎಚ್ 11 ಎ ಎಲ್ 2345 ನೇದ್ದನ್ನು ಹಾಜರುಪಡಿಸಿದ್ದು ಪೊಲೀಸರು ನಮ್ಮ ಸಮಕ್ಷಮ ಅದನ್ನು ಅಮಾನತುಪಡಿಸಿಕೊಂಡು ಸ್ಥಳದಲ್ಲಿ ಮಧ್ಯಾಹ್ನ 1.20 ರಿಂದ 3 ಘಂಟೆ ವರೆಗೆ ಪಂಚನಾಮೆ ಬರೆದು ನಮ್ಮ ಸಹಿ ಪಡೆದರು ಅಂದರೆ ಸರಿಯಲ್ಲ. ನಿಶಾನೆ ಪಿ-60 ರಿಂದ 73 ರಂತೆ ಪಂಚನಾಮೆ ಕಾಲಕ್ಕೆ ಫೋಟೊ ತೆಗೆದರು ಅಂದರೆ ಸರಿಯಲ್ಲ.

7. ಟಿ ವಿ ಎಸ್ 8.8 ಬೋಲ್ಟನ್ನು ನನಗೆ ನೀಡಿ ನ್ಯಾಯಾಲಯದಲ್ಲಿ ಹಾಜರುಪಡಿಸುವಂತೆ ಹೇಳಿ ನನ್ನ ಕಡೆಯಿಂದ ಸ್ವೀಕೃತಿ ಪಡೆದರು ಅಂದರೆ ಸರಿಯಲ್ಲ. 3 ನೇ ಆರೋಪಿತನನ್ನು ನೋಡಿದ್ದರೂ ಸಹ ಆತನ ಪರಿಚಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

8. ಪೊಲೀಸ ರೂ.1500/-ಹಣ , ಒಂದು ಸ್ಯಾಮಸಂಗ ಫೋನ ಮತ್ತು ಮಾದರಿ 100 ಗ್ರಾಂ ಗಾಂಜಾವನ್ನು ಆರೋಪಿತನಿಂದ ನನ್ನ ಸಮಕ್ಷಮ ಅಮಾನತುಪಡಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ. ನಿಶಾನೆ ಪಿ-60 ರಲ್ಲಿ ಕಂಡುಬರುವ ಕಾರನ್ನು ಆ ದಿನ ಅಮಾನತುಪಡಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ.

9. ದಿಃ 25-12-2020 ರಂದು ಪೊಲೀಸರು ನನ್ನನ್ನು ಪುನಃ ಕರೆಸಿ ಅವರ ವಶದಲ್ಲಿದ್ದ ಚಂದ್ರಕಾಂತ ಚವ್ಹಾನ ರವರನ್ನು ತೋರಿಸಿದರು ಅಂದರೆ ಸರಿಯಲ್ಲ. ಆತನ ವಿಚಾರಣೆ ಮಾಡಲಾಗಿ ಆತ 3 ನೇ ಆರೋಪಿಗೆ ಗುಲಬುರ್ಗಾ ಬೆಂಗಳೂರು ಹೈವೆ ರೋಡದಲ್ಲಿ 8 ದಿನಕ್ಕೊಮ್ಮೆ ಗಾಂಜಾ ಕೊಟ್ಟು ಹೋಗುತ್ತಿದ್ದೆ ಹಾಗೂ 3 ನೇ ಆರೋಪಿ 4 ನೇ ಆರೋಪಿಯ Axis ಬ್ಯಾಂಕಗೆ ಹಣ ಹಾಕುತ್ತಿದ್ದ ಎಂದು

ಹೇಳಿದನು ಅಂದರೆ ಸರಿಯಲ್ಲ. ಅದರಂತೆ ನಾನು ಪೊಲೀಸರ ಮುಂದೆ ನಿಶಾನೆ ಪಿ– 74 ರಂತೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ.

10. ಎಲ್ಲ ವಿಷಯ ಗೊತ್ತಿದ್ದರೂ ಹಾಗೂ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿದ್ದರೂ ಸಹ 3 ಮತ್ತು 4 ನೇ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀಸವಾಲು ಆರೋಪಿಗಳ ಪರವಾಗಿ ವಕೀಲರಿಂದಃ**

**ಪಾಟೀ ಸವಾಲು ಇಲ್ಲ .**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಶ್ರೀಮತಿ ಕೆ.ಜಿ. ಶಾಂತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.